Tel: "UNIKARNATAK" Phone: (0836)-2215271

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

# KARNATAK UNIVERSITY, DHARWAD.

*NAAC Accreditted with "A" Grade 2022*

UNIVERSITY WITH POTENTIAL FOR EXCELLENCE"

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕ — SCH. CASTES & SCH. TRIBES CELL

ಪಾವಟೆ ನಗರ, ಧಾರವಾಡ-೫೮೦೦೦೩. — Pavate Nagar, Dharwad – 580003

ಕವಿ.40(ಪಜಾ:ಪಪಂ)/2023-24/888/751 ದಿನಾಂಕ: 25-10-2023

2 5 OCT 2023

## ಸುತ್ತೋಲೆ

**ವಿಷಯ:** ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 2022-23ನೇ ಸಾಲಿನಲ್ಲಿ ಪ್ರಥಮ ವರ್ಷ-2ನೇ ಸೆಮಿಸ್ಟರ) ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ SCP/TSP ಯೋಜನೆ ಅನುದಾನದ ಅಡಿಯಲ್ಲಿ ಒಟ್ಟು ಲ್ಯಾಪಟಾಪ್‌ಗಳ ಮಾಹಿತಿಯನ್ನು ನಿರ್ದಿಷ್ಟ ಪಡಿಸಿಕೊಳ್ಳಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದರ ಕುರಿತು.

**ಉಲ್ಲೇಖ:** 1) **ಈ ಕಚೇರಿ ಸುತ್ತೋಲೆ ಸಂಖ್ಯೆ** ಕವಿ.40(ಪಜಾ:ಪಪಂ)/2022-23/ 163 ದಿನಾಂಕ 8.9.2022

2) ಮಾನ್ಯ ಕುಲಪತಿಗಳ ಆದೇಶ ದಿನಾಂಕ: 20-10-2023

******

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ / ಸ್ನಾತಕೋತ್ತರ ಕೇಂದ್ರಗಳ (ಹಾವೇರಿ, ಗದಗ ಮತ್ತು ಕಾರವಾರ) ಆಡಳಿತಾಧಿಕಾರಿಗಳಿಗೆ / ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉಲ್ಲೇಖ 1 ರ ಪ್ರಕಾರ 2020-21, 2021-22 (4ನೇ ಸೆಮಿಸ್ಟರ ಮುಗಿಸಿದ) ಹಾಗೂ 2022-23 (ದ್ವಿತಿಯ ವರ್ಷದ) ಸಾಲಿನ ವಿದ್ಯಾರ್ಥಿಗಳ ಲ್ಯಾಪಟಾಪ್ ಸಲುವಾಗಿ ಈಗಾಗಲೇ ಘಟಕಕ್ಕೆ ಕಳುಹಿಸಿರುವ ಅರ್ಜಿಗಳನ್ನು ಪರೀಶಿಲಿಸಿದಾಗ ಹಲವಾರು ವಿದ್ಯಾರ್ಥಿಗಳು ಬೇರೆ ಬೇರೆ ಸಾಲಿನ ಅರ್ಜಿ ನಮೂನೆಯನ್ನು ಪಡೆದು ಅರ್ಜಿಗಳನ್ನು ಭರ್ತಿಮಾಡಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಮೇಲೆ ಸೂಚಿಸಿದ ಸಾಲಿನ ವಿದ್ಯಾರ್ಥಿಗಳ ಯಾದಿಯನ್ನು ಪರಿಶೀಲಿಸಿಲು **ಆಯಾ ವರ್ಷಗಳ ಅನುಗುಣವಾಗಿ ಯಾದಿಯನ್ನು ಅತೀ ಜರೂರಾಗಿ ಪತ್ರದ ಮೂಲಕ ಸಲ್ಲಿಸಲು ತಿಳಿಸಲಾಗಿದೆ.**

ಮುಂದುವರೆದು, ಸರ್ಕಾರವು ಮಂಜೂರು ಮಾಡುವ SCP/TSP ಯೋಜನೆಯ ಅನುದಾನದ ಬಿಡುಗಡೆಗೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ ಇವರಿಗೆ ಕೋರಲಾಗಿದೆ. ಈ ದಿಸೆಯಲ್ಲಿ ಸರ್ಕಾರಕ್ಕೆ ಸನ್ 2022-23ನೇ ಸಾಲಿನ ಎರಡನೇಯ ಸೆಮಿಸ್ಟರನಲ್ಲಿ ವ್ಯಾಸಂಗಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ನಿರ್ದಿಷ್ಟ ಸಂಖ್ಯೆಯ ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು. ತದನಂತರ ಸರ್ಕಾರವು ಅನುದಾನ ಮಂಜೂರು ಮಾಡಿದಲ್ಲಿ ನಿಬಂಧನೆಗೆ / ಷರತ್ತಿಗೆ ಒಳಪಡಿಸಿ ಲ್ಯಾಪಟಾಪ್‌ಗಳನ್ನು ಟೆಂಡರ ಮೂಲಕ ಖರೀದಿಸಿ ಆಡಳಿತಾತ್ಮಕ ಒಪಿಗೆ ಮೇರೆಗೆ ಪೂರೈಸಲಾಗುವುದು. ಆದ್ದರಿಂದ **ವಿದ್ಯಾರ್ಥಿಗಳು** ವಿಶ್ವವಿದ್ಯಾಲಯದ ಜಾಲತಾಣ www.kud.ac.in ದಲ್ಲಿ ಅರ್ಜಿಯನ್ನು ಪಡೆದುಕೊಂಡು ಈ ಕೆಳ ಕಾಣಿಸಿದ ದಾಖಲಾತಿಗಳೊಂದಿಗೆ **ದಿನಾಂಕ**: 09-11-2023ರ ಒಳಗಾಗಿ ವ್ಯಾಸಂಗಮಾಡಿದ ವಿಭಾಗಗಳ ಮುಖ್ಯಸ್ಥರುಗಳಿಗೆ ಸಲ್ಲಿಸಲು ತಿಳಿಯಪಡಿಸಿದೆ.

| ಕ್ರಸಂ | **ಸ್ನಾತಕೋತ್ತರ ವಿದ್ಯಾರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು (ಧೃಡೀಕರಣದೊಂದಿಗೆ)** |
|---|---|
| 1 | ಜಾತಿ ಪ್ರಮಾಣ ಪತ್ರ |
| 2 | ಚಾಲ್ತಿ ಇರುವ ಪಾಲಕರ ಕುಟುಂಬದ ಆದಾಯ ಪ್ರಮಾಣ ಪತ್ರ |
| 3 | ಸ್ನಾತಕೋತ್ತರ ಅಂಕ ಪಟ್ಟಿ (ಪ್ರಥಮ / ದ್ವಿತೀಯ ಸೆಮಿಸ್ಟರ್) |
| 4 | ವಿದ್ಯಾರ್ಥಿಯ ವಿಭಾಗದ ಗುರುತಿನ ಚೀಟಿ |
| 5 | ವಿದ್ಯಾರ್ಥಿಯ ಆಧಾರ ಕಾರ್ಡ |

ಪು.ತಿ.ನೋ

ವಿಭಾಗದ **ಮುಖ್ಯಸ್ಥರುಗಳು** ವಿದ್ಯಾರ್ಥಿಗಳಿಂದ ಪಡೆದುಕೊಂಡ ಎಲ್ಲ ಅರ್ಜಿಗಳನ್ನು ಉಪಕುಲಸಚಿವರು, ಪಜಾತಿ/ಪಪಂಗಡ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಹಾಗೂ ಯಾದಿಯನ್ನು **ದಿನಾಂಕ:** 18-11-2023 ರ ಒಳಗಾಗಿ **ಸಲ್ಲಿಸಲು** ಈ ಮೂಲಕ ತಿಳಿಸಲಾಗಿದೆ.

**ವಿಶೇಷ ಸೂಚನೆ:**

**1)** ಆದಾಯ ಪ್ರಮಾಣವು 5 ವರ್ಷದೊಳಗಿರಬೇಕು ಹಾಗೂ ಸರ್ಕಾರದ ನಿಯಮದ ಪ್ರಕಾರ ಕುಟುಂಬದ ವಾರ್ಷಿಕ ಆದಾಯ 5ಲಕ್ಷ ಮೀರುವಂತಿಲ್ಲ.

**2)** ಈಗಾಗಲೇ ಹಿಂದಿನ ವ್ಯಾಸಂಗದ ಅವಧಿಯಲ್ಲಿ ಲ್ಯಾಪಟಾಪ್ ಪಡೆದುಕೊಂಡ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಹರಿರುವುದಿಲ್ಲ.

25/10/23

**ಕುಲಸಚಿವರು**

**ಪ್ರತಿ ಸಾದರಪೂರ್ವಕವಾಗಿ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ;**

1) ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು ಕವಿವಿ ಆವರಣ, ಧಾರವಾಡ
2) ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು/ಸಂಯೋಜಕರುಗಳು ಹಾವೇರಿ, ಗದಗ ಮತ್ತು ಕಾರವಾರ
3) ಮಾನ್ಯ ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಂಪೌಂಡ, ಧಾರವಾಡ.
4) ಸಹಾಯಕ ನಿರ್ದೇಶಕರು–ಗ್ರೇಡ–1, ತಾಲೂಕಾ ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಂಪೌಂಡ, ಧಾರವಾಡ
5) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ಕವಿವಿ, ಧಾರವಾಡ.
6) ಕುಲಸಚಿವರ ಆಪ್ತ ಸಹಾಯಕರು, ಕವಿವಿ, ಧಾರವಾಡ.
7) ಹಣಕಾಸು ಅಧಿಕಾರಿಗಳ ಕಾರ್ಯಾಲಯ, ಕವಿವಿ, ಧಾರವಾಡ